<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ. 110/2021</u>

<u>ದಿನಾಂಕ ಃ 12.08.2026 ರಂದು ಪ್ರಮಾಣ ವಚನ ಬೋದಿಸಲಾಗಿದೆ.</u>

ಸಿ. ಡಬ್ಲ್ಯೂ: 18 ಪಿ. ಡಬ್ಲ್ಯೂ: 15

| | |
|---|---|
| ಸಾಕ್ಷಿದಾರರ ಹೆಸರು | ಚಂದ್ರಶೇಖರ್ ಕೆ ಎನ್ |
| ತಂದೆಯ ಹೆಸರು | ನಾರಾಯಣ |
| ವಯಸ್ಸು | 41 ವರ್ಷ |
| ಉದ್ಯೋಗ | ಸಿ ಪಿ ಐ, ಶಾಂತಿಗ್ರಾಮ ವೃತ್ತ, ಹಾಸನ. |
| ವಾಸ | ಹಾಸನ. |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ದಿಃ 26.07.2017 ರಿಂದ ದಿಃ 09.09.2018 ರವರೆಗೆ ನಾನು ನಾಗಮಂಗಲ ಪಟ್ಟಣ ಪೊಲೀಸ್ ಠಾಣೆಯ ಪಿಎಸ್ಐ ಕರ್ತವ್ಯ ನಿರ್ವಹಿಸಿರುತ್ತೇನೆ.
2. ಈ ಪ್ರಕರಣದ ಕಡತವನ್ನು ನಾನು ಚಾಸಾ.17 ರವರಿಂದ ದಿಃ26.07.2017 ರಂದು ತನಿಖೆಗಾಗಿ ಪಡೆದುಕೊಂಡಿದ್ದೇನೆ.
3. ದಿಃ 08.10.2017 ರಂದು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಿಂದ ಗಾಯಾಳು ಅಫೀಜ್ ಉಲ್ಲಾ ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ.
4. ದಿಃ 17.11.2017 ರಂದು ತಾಲ್ಲೂಕು ಸರ್ಕಾರಿ ಆಸ್ಪತ್ರೆ ನಾಗಮಂಗಲ ರವರಿಗೆ ಪತ್ರ ಬರೆದು, ಗಾಯಾಳು ಅಫೀಜ್ ಉಲ್ಲಾರವರ ಮೈ ಮೇಲೆ ಆದ ಗಾಯಗಳು, ನಿಪಿ.9 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಗಾಯಗಳು, ಈ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿದ ಮುಮಾ.1 ಕಬ್ಬಿಣದ ರಾಡಿನಿಂದ ಆಗುವ ಸಾಧ್ಯತೆ ಇದೆಯೇ ಎಂಬ ಬಗ್ಗೆ ಅಭಿಪ್ರಾಯ ಕೋರಿ, ಅವರಿಗೆ ಮುಮಾ.1 ನ್ನು ಹಸ್ತಾಂತರಿಸಿದ್ದೇನೆ.
5. ಸದರಿ ಮನವಿಯನ್ನು ನಿಪಿ.10. ನಿಪಿ.10 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು 10(ಬಿ) ಎಂದು ಗುರುತಿಸಲಾಯಿತು.
6. ದಿಃ 18.11.2017 ರಂದು ವೈದ್ಯಾಧಿಕಾರಿಗಳು ಮುಮಾ.1 ನ್ನು ಪರೀಕ್ಷಿಸಿ ನಿಪಿ.11 ರಂತೆ ವರದಿಯನ್ನು ನೀಡಿ, ಮುಮಾ.1 ನ್ನು ಹಿಂದಿರುಗಿಸಿದ್ದಾರೆ.

7. ದಿಃ 26.11.2017 ರಂದು ಸದರಿ ಪ್ರಕರಣದ ಆರೋಪಿಗಳ ಮೇಲೆ ಹಿಂದಿನ ತನಿಖಾಧಿಕಾರಿ ಮಾಡಿದ ತನಿಖೆ ಮತ್ತು ನಾನು ಮಾಡಿದ ತನಿಖೆಯಿಂದ ಆರೋಪ ದೃಢಪಟ್ಟ ಕಾರಣ ಅವರ ಮೇಲೆ ದಂಡ ಸಂಹಿತೆ ಕಲಂ.504, 114, 307, 324, 506 ಸಹವಾಚಕ 34 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ ಮತ್ತು ಇಲಾಖೆಗೆ ವರದಿ ಮಾಡಿಕೊಂಡಿದ್ದೇನೆ.

**<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಡಿ ಎಂ ಎಂ ವಕೀಲರಿಂದ ಃ</u>**

8. ಯಾವುದೇ ಪ್ರಕರಣದ ತನಿಖೆಯನ್ನು ಪ್ರಾರಂಭಿಸಿದಾಗ ಹಿಂದೆ ತನಿಖೆ ಆಗಿದ್ದಲ್ಲಿ ಕಡತಗಳನ್ನು ಪರಿಶೀಲಿಸುವ ಕ್ರಮ ಇದೆ ಎಂದರೆ ಸರಿ. ನಮ್ಮ ಪೊಲೀಸ್ ಠಾಣೆಯಿಂದ ಘಟನೆ ಆಗಿದೆ ಎನ್ನಲಾದ ಸ್ಥಳ 5 ನಿಮಿಷದ ದಾರಿಯಷ್ಟು ಅಂತರದಲ್ಲಿದೆ ಎಂದರೆ ಸರಿ. ಘಟನೆಯಾದ 1 ವರೆ ದಿನಗಳ ನಂತರ ದೂರು ದಾಖಲಾಗಿದೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಲಾದ ಸಮಯದಿಂದ ದೂರು ದಾಖಲಾಗುವವರೆಗೆ ಬೇರೆ ಸಾರ್ವಜನಿಕರು ಘಟನೆಯ ಬಗ್ಗೆ ಮಾಹಿತಿ ನೀಡಿದ ವಿಚಾರ ಕಡದಲ್ಲಿ ಕಂಡು ಬರುವುದಿಲ್ಲ. ನಿಪಿ.9 ರಲ್ಲಿ ಇಸವಿ 2016 ಎಂದು ತಿದ್ದಿ ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ assault by Iron rod ಎಂಬಲ್ಲಿ 06.08.2010 ಎಂದು ನಮೂದು ಇದೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 25.07.2016 ಎನ್ನುವುದನ್ನು ತಿದ್ದಿ ಬರೆಯಲಾಗಿದೆ ಎಂದರೆ ಸರಿ. ಈ ರೀತಿ ತಿದ್ದಿ ಬರೆದ ಬಗ್ಗೆ ನಾನು ಸಂಬಂಧಿತ ವೈದ್ಯಾಧಿಕಾರಿಗಳಿಂದ ಸಮಜಾಯಿಷಿಸಿ ಪಡೆದುಕೊಂಡಿಲ್ಲ. ಘಟನೆ ಆಗಿದೆ ಎಂದು ಹೇಳಲಾದ ದಿನಾಂಕ ಒಂದು ವರುಷದ ನಂತರ ಮುಮಾ.1 ನ್ನು ಹಾಜರು ಪಡಿಸಿ ಅಭಿಪ್ರಾಯ ಕೇಳಲಾಗಿದೆ ಎಂದರೆ ಸರಿ. ಗಾಯದ ಪ್ರಮಾಣ ಪತ್ರವನ್ನು ದಿಃ 08.10.2017 ರಂದು ಪಡೆದುಕೊಂಡ ಕಾರಣ, ಬಳಿಕ ನಿಪಿ.10 ರಂತೆ ಅಭಿಪ್ರಾಯ ಕೋರಿದ್ದೇನೆ. ಹಿಂದಿನ ತನಿಖಾಧಿಕಾರಿ, ಅವರ ತನಿಖೆಯ ಅವಧಿಯಲ್ಲಿ ನಿಪಿ.10 ರಂತೆ ಅಭಿಪ್ರಾಯವನ್ನು ಯಾಕೆ ಕೇಳಿಲ್ಲ ಎಂದು ನಾನು ಅವರಿಂದ ಕೇಳಿ ತಿಳಿದುಕೊಂಡಿಲ್ಲ.

9. ವೈದ್ಯಾಧಿಕಾರಿಗಳಿಗೆ ಮುಮಾ.1 ನ್ನು ಸೀಲು ಮಾಡದೇ ನೀಡಲಾಗಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ.9 ಮತ್ತು ನಿಪಿ.11 ಮತ್ತು ಮುಮಾ.1 ನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯ ಚಿತಾವಣೆಯ ಮೇರೆಗೆ ಅಫೀಜ್ ಉಲ್ಲಾ ಎನ್ನುವವರ ಅಣ್ಣ ಜಾಫರ್ ಮೇಲೆ ಪೋಕ್ಸೋ ಪ್ರಕರಣ ದಾಖಲಾಗಿದ್ದರಿಂದ, ದೂರುದಾರರು ಆರೋಪಿಯ ವಿರುದ್ದ ಸುಳ್ಳು ದೂರು ನೀಡಿದ್ದಾರೆ

ಎಂದರೆ ಸರಿಯಲ್ಲ. 3 ನೇ ಆರೋಪಿಯು ನೀಡಿದ್ದ ದೂರಿನ ಮೇರೆಗೆ ಅಫೀಜ್ ಉಲ್ಲಾ ಮೇಲೆ ಎಸ್.ಸಿ.ನಂಃ 112/2021 ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹಿಂದಿನ ತನಿಖಾಧಿಕಾರಿಗಳು ದಾಖಲು ಮಾಡಿದ್ದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ನಿಪಿ.9 ರಿಂದ 11 ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯ ವೇಳೆ, ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಮತುತ ಅವರ ಮೇಲೆ ಯಾವುದೇ ದೋಷಾರೋಪಣ ಪಟ್ಟಿ ಸಲ್ಲಿಸಲು ಸಾಕ್ಷ್ಯ ಆಧಾರ ಇಲ್ಲದೇ ಇದ್ದರೂ ಸಹ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.